**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತಳವಾರ್ ಸಾಬಣ್ಣಾ ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ.**

**ಹೇಳಿಕೆ:-** ಭಾರತದ ಸಂವಿಧಾನದ 315 ನೇ ಅನುಚ್ಛೇದದ ಅಡಿಯಲ್ಲಿ 1950 ರಲ್ಲಿ ರಚಿತವಾದ ಕರ್ನಾಟಕ ಲೋಕಸೇವಾ ಆಯೋಗವು ಸಾರ್ವಜನಿಕ ವಲಯದಲ್ಲಿ ಸ್ವಾಯತ್ತತೆ ಮತ್ತು ಘನತೆ ಪಡೆದ ಸಂಸ್ಥೆಯಾಗಿದೆ. ಆದರೆ, ಇಂದು ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಗಳು ತಮ್ಮ ಅಧಿಕಾರದ ಬಳಕೆಯಲ್ಲಿ ಸೃಷ್ಟಿಯಾಗಿರುವ ವಿವಾದಗಳು ಕರ್ನಾಟಕದ ಜನತೆಗೆ ತಪ್ಪು ಸಂದೇಶ ರವಾನೆಯಾಗುತ್ತಿದೆ. ಹೀಗಾಗಿ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು/ಸದಸ್ಯರುಗಳು ಮತ್ತು ಕಾರ್ಯದರ್ಶಿ ನಡುವೆ ಅಧಿಕಾರ ಚಲಾಯಿಸುವ ಗೊಂದಲದ ಕುರಿತು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

**ಸರ್ಕಾರದ ಉತ್ತರ:-**

ಭಾರತದ ಸಂವಿಧಾನದ 315 ನೇ ಅನುಚ್ಛೇದದ ಅಡಿಯಲ್ಲಿ 1950 ರಲ್ಲಿ ರಚಿತವಾದ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯನಿರ್ವಹಣೆ ಕುರಿತಂತೆ The Karnataka Public Service Commission (Conduct of Business and Additional Functions) Act, 1959 ಮತ್ತು The Karnataka Public Service Commission (Functions) Rules, 1973 ರಲ್ಲಿ ನಿಯಮಗಳನ್ನು ರಚಿಸಲಾಗಿದ್ದು, ಅದರನ್ವಯ ಅಧ್ಯಕ್ಷರು ಮತ್ತು ಸದಸ್ಯರು ಕಾರ್ಯನಿರ್ವಹಿಸುತ್ತಾರೆ ಮತ್ತು ಆಯೋಗದ ಕಾರ್ಯದರ್ಶಿಯವರು ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿಯಲ್ಲಿನ ಅಧ್ಯಯ 8ರಂತೆ ಕಾರ್ಯನಿರ್ವಹಿಸುತ್ತಾರೆ.

ಅಧ್ಯಾಯ 2ರ ನಿಯಮ 3 ರಿಂದ 15 ಮತ್ತು ಅಧ್ಯಾಯ 3ರ ನಿಯಮ 16 ರಿಂದ 18 ರವರೆಗೆ ವಿವರವಾಗಿ ಆಯೋಗದ ಕಾರ್ಯಗಳ ಬಗ್ಗೆ ವಿವರಿಸಲಾಗಿರುತ್ತದೆ. ಅದರಂತೆ, ಆಯೋಗದಲ್ಲಿ ಉದ್ಭವಿಸುವ ಯಾವುದೇ ಪ್ರಶ್ನೆಗಳನ್ನು ಆಯೋಗದ ಸದಸ್ಯರ ಸಭೆಯಲ್ಲಾಗಲೀ ಅಥವಾ ಸುತ್ತೋಲೆ ಕಳುಹಿಸುವ ಮೂಲಕವಾಗಲೀ ನಿರ್ಣಯಿಸುವುದು, ಕಾರ್ಯದರ್ಶಿಯು ಕಾರ್ಯಸೂಚಿಯನ್ನು ತಯಾರಿಸತಕ್ಕದ್ದು ಮತ್ತು ಎಲ್ಲ ಸದಸ್ಯರುಗಳಿಗೆ ನೋಟೀಸು ನೀಡಿದ ತರುವಾಯ ಆಯೋಗದ ಸಭೆಗಳನ್ನು ಕರೆಯತಕ್ಕದ್ದು,ಮುಂದುವರೆದು ಕಾರ್ಯದರ್ಶಿಯವರು ಆಯೋಗದ ಎಲ್ಲಾ ನಿರ್ಣಯಗಳನ್ನು ಆಯೋಗವು ಸೂಚಿಸುವ ರೀತಿಯಲ್ಲಿ ತಯಾರಿಸತಕ್ಕದ್ದು.

ಮುಂದುವರೆದು, ಆಯೋಗದ ಕಾರ್ಯದರ್ಶಿಯವರ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿಯಲ್ಲಿನ ಅಧ್ಯಾಯ 8 ರಲ್ಲಿ ವಿವರಿಸಲಾಗಿದ್ದು, ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತದೆ:

> ಆಯೋಗದ ನಿರ್ದೇಶನದಂತೆ ಆಯೋಗಕ್ಕೆ ಸಂಬಂಧಿಸಿದಂತೆ ಎಲ್ಲ ವ್ಯವಹಾರಗಳ ನಿರ್ವಹಣೆ, ಆಯೋಗದ ನೀತಿ ಮತ್ತು ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವುದು, ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಸಂಬಂಧಿತ ಸಂಗತಿಗಳನ್ನು ಆಯೋಗದ ಮುಂದೆ ಇಡುವುದು ಮತ್ತು ನಿರ್ಣಯ ತೆಗೆದುಕೊಳ್ಳುವಾಗ ಅವಶ್ಯಕ ಮಾರ್ಗದರ್ಶನ ನೀಡುವುದು, ಆಯೋಗದ ಯಾವುದೇ ನಿರ್ಣಯವು ಕಾನೂನು ಅಥವಾ ನಿಯಮಗಳಿಗೆ ವಿರುದ್ಧವಾಗಿದ್ದಲ್ಲಿ ಅಧ್ಯಕ್ಷರ/ಆಯೋಗದ ಗಮನ ಸೆಳೆಯುವುದು ಮತ್ತು ಕಛೇರಿ ಹಾಗೂ ಸಿಬ್ಬಂದಿಗಳ ಮೇಲ್ವಿಚಾರಣೆ ಮಾಡುವುದು ಇತ್ಯಾದಿ.

...2

ಇತ್ತೀಚೆಗೆ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಯವರು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳ ವಿರುದ್ಧ ಸರ್ಕಾರಕ್ಕೆ ದೂರುಗಳನ್ನು ಸಲ್ಲಿಸಿ ಕರ್ನಾಟಕ ಲೋಕಸೇವಾ ಆಯೋಗದ ಕಾನೂನು ಕೋಶದ ಮುಖ್ಯಸ್ಥರ ಹುದ್ದೆಗೆ ಅಧ್ಯಕ್ಷರು ಸೂಚಿಸಿದವರಿಗೆ ನೇಮಕಾತಿ ಆದೇಶ ಹೊರಡಿಸಿರುವುದಿಲ್ಲವೆಂದು ಆಯೋಗದ ಸಭೆಗಳನ್ನು ಬಹಿಷ್ಕರಿಸುವುದು, ಆಯ್ಕೆಪಟ್ಟಿಗಳಿಗೆ ಸಹಿ ಮಾಡುವುದಿಲ್ಲ ಎಂದು ನಿರ್ಣಯಿಸಿರುವುದು, ಆಯೋಗದ ಕೆಲವು ಸದಸ್ಯರುಗಳು ಆಯೋಗದ ಗಣಕ ಕೇಂದ್ರದ ಶಾಖೆಗೆ ತೆರಳಿ ತಾವು ಸೂಚಿಸುವ ಕೆಲಸವನ್ನು ನಿರ್ವಹಿಸುವಂತೆ ಅಧಿಕಾರಿ/ಸಿಬ್ಬಂದಿಗಳ ಮೇಲೆ ಒತ್ತಡವನ್ನು ಹೇರುವುದು, ಪರೀಕ್ಷೆಗಳ ಕೀ-ಉತ್ತರಗಳನ್ನು ಪ್ರಕಟಿಸುವ ಹಾಗೂ ಫಲಿತಾಂಶಗಳ ಕಡತಗಳಿಗೆ ಅನುಮೋದನೆಗೆ ನೀಡಲು ವಿಳಂಬ ನೀತಿ ಅನುಸರಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಆಯೋಗದ ಕಾರ್ಯದರ್ಶಿಯವರ ವಿರುದ್ಧ ಸರ್ಕಾರಕ್ಕೆ ದೂರು ಸಲ್ಲಿಸಿ ಕಾನೂನು ಕೋಶದ ಮುಖ್ಯಸ್ಥರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಸಹ ಹೊಸದಾಗಿ ಅಧಿಸೂಚನೆಯನ್ನು ಜಾರಿ ಮಾಡಿರುವುದು, ಗೋಪ್ಯತೆಯನ್ನು ಉಲ್ಲಂಘಿಸಿರುವುದು, ಆಯೋಗದ ನಿರ್ಣಯವನ್ನು ಪಾಲಿಸದೆ ಪರೀಕ್ಷಾ ದಿನಾಂಕ ನಿಗಧಿಪಡಿಸಿ ಪರೀಕ್ಷೆ ನಡೆಸಿರುವುದು, ಅನುಮೋದನೆ ಇಲ್ಲದೆ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿರುವುದು ಮತ್ತು ಆಯೋಗದ ಅನುಮೋದನೆ ಇಲ್ಲದೇ ಕೀ-ಉತ್ತರಗಳನ್ನು ಪ್ರಕಟಿಸುತ್ತಿರುವುದು, ಆಯೋಗದ ಅಧ್ಯಕ್ಷರ ಸಹಮತಿ ಇಲ್ಲದೇ ಆಯೋಗದ ಸಭೆ ಕರೆದಿರುವುದು, ಅಧ್ಯಕ್ಷರ ಗಮನಕ್ಕೆ ತರದೇ ಪರ್ಯಾಯವಾಗಿ ಸಭೆ ನಡೆಸಿರುವುದು ಮತ್ತು ಆಯೋಗದ ಅನುಮೋದನೆ ಇಲ್ಲದೇ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಿರುವುದಾಗಿ ತಿಳಿಸಿರುತ್ತಾರೆ.

ಆದರೆ ಇದರಿಂದ ಆಯೋಗದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ಯಾವುದೇ ವ್ಯತ್ಯಯವಾಗಿರುವುದಿಲ್ಲ. ಎಲ್ಲಾ ನೇಮಕಾತಿ ಪ್ರಕ್ರಿಯೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆಯೋಗದ ವತಿಯಿಂದ ಕಳೆದ 05 ವರ್ಷಗಳಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳಿಂದ 8225 ಹುದ್ದೆಗಳಿಗೆ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ಕಾಲಕಾಲಕ್ಕೆ ಅಧಿಸೂಚನೆಗಳನ್ನು ಜಾರಿಗೊಳಿಸಿ ಪರೀಕ್ಷೆ/ಸಂದರ್ಶನಗಳನ್ನು ನಡೆಸಿ 5333 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.

**ಸಂಖ್ಯೆ:ಸಿಆಸುಇ 43 ಎಸ್‌ಎಲ್‌ಎ 2024.**

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿ**